**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**<u>ಸಿ.ಸಿ. ನಂ: 50/2015</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀನಿವಾಸ** | **ಪಿ.ಡಬ್ಲ್ಯೂ-02** |
| **ತಂದೆಯ ಹೆಸರು** | **:** | **ವಿ.ರಾಮಣ್ಣ** | **ಸಿ.ಡಬ್ಲ್ಯೂ-02** |
| **ವಯಸ್ಸು** | **:** | **37 ವರ್ಷ** | |
| **ಉದ್ಯೋಗ** | **:** | **ವ್ಯವಸಾಯ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 25.11.2025.** |
| **ವಾಸಸ್ಥಳ** | **:** | **ಕೆರೆ ರಾಮಪುರ ಗ್ರಾಮ, ಸಂಡೂರು** | |

**<u>ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಸುಮಾರು 12 ವರ್ಷಗಳ ಹಿಂದೆ ಅರಣ್ಯ ಅಧಿಕಾರಿಗಳು ನಮ್ಮ ಊರಿಗೆ ಬಂದು ಲಾರಿಗಳನ್ನು ಜಪ್ತು ಮಾಡಿದ ವಿಷಯವಾಗಿ ನನ್ನ ಸಹಿ ಪಡೆದಿರುತ್ತಾರೆ. ಆಗ ನನ್ನ ಜೊತೆ ಚಾಸಾ 1, 3 ಮತ್ತು 4 ರವರು ಇದ್ದರು. ಅರಣ್ಯ ಅಧಿಕಾರಿಗಳು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಯಾರು ಸಹ ಸಹಿ ಹಾಕದೇ ಇರುವುದರಿಂದ ಅವರು ಬಂದು ನಮ್ಮ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿ ನಿಪಿ 1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ಸಾಕ್ಷಿ ನೋಟಿಸ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನೋಟಿಸ್ ನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ 1 ಮತ್ತು 3 ರಲ್ಲಿ ಇರುವ ವಿಷಯ ನನಗೆ ಗೊತ್ತಿಲ್ಲ.

**(ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ</u>**

ದಿಃ 10.09.2013 ರಂದು ನನಗೆ ಮತ್ತು ಚಾಸಾ 1, 3 ಮತ್ತು 4 ರವರನ್ನು ಅರಣ್ಯ ಅಧಿಕಾರಿಗಳು ಪಂಚನಾಮೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಪರವಾನಿಗೆ ಇಲ್ಲದೆ ಗಣಿಗಾರಿಕೆ ಮಾಡಿ ಲೋಡ ಮಾಡಿಕೊಂಡು ಸಾಗಾಣಿಕೆ ಮಾಡುತ್ತಿರುವ ವಿಚಾರದಲ್ಲಿ ಕಲ್ಲುಮಟ್ಟಿಯ ಹತ್ತಿರ ನಿಪಿ1 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನನ್ನ ಮತ್ತು ಚಾಸಾ 1, 3 ಮತ್ತು 4 ರವರ ಸಮಕ್ಷಮ ಬೆಃ5.00 ರಿಂದ 6.00 ರವರೆಗೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಮೊದಲು ಪಂಚನಾಮೆಗೆ ಬರಲು ನನಗೆ ನಿಪಿ 3 ರಂತೆ ನೋಟಿಸ್ ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರಃ ಇಲ್ಲ.</u>**

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**